Government of Karnataka. When that is the case, why the Government is not having any report connected with it?

ಅಧ್ಯಕ್ಷರು.—ಸರಿ ಕೂತ್ಕೊಳ್ಳಿ. ಚಂದ್ರಕಾಂತ ಬೆಲ್ಲದ್ ಅವರೇ ನೀವು ಪ್ರಶ್ನೆ ಕೇಳಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಅಧ್ಯಕ್ಷರೇ.....

ಅಧ್ಯಕ್ಷರು —ಡೈರಿ ಮಿನಿಸ್ಟರ್ ಯಾರು ?

ಶ್ರೀ ವೀರಣ್ಣ (ಸಾರಿಗೆ ಖಾತೆ ರಾಜ್ಯ ಮಂತ್ರಿಗಳು).—ಉತ್ತರ ಕಳುಹಿಸಿ ಕೊಡುತ್ತೇವೆ ಸ್ವಾಮಿ.

ಶ್ರೀ ಎಂ. ಎಸ್. ಪಾಟೀಲ್.—ಮಿನಿಸ್ಟರ್ ಯಾರು ಉತ್ತರ ಕೊಡುತ್ತಾರೆಂಬುದು ಗೊತ್ತಾ, ಗುತ್ತಿಲ್ಲ. ನೀವೂ ಕಾಯಬೇಕು. ನಾವೂ ಕಾಯಬೇಕು.

ಅಧ್ಯಕ್ಷರು.—ಕೌನ್ಸಿಲ್ಲಿಗೆ ಹೋಗಿದ್ದಾರೆ, ಬರಲಿ. ಇದಿನಬ್ಬ ಮುಂದಿನ ಪ್ರಶ್ನೆ ಕೇಳಲಿ ಈಗ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು ಮಾನ್ಯ ಅಧ್ಯಕ್ಷರೆ. ಪುನಃ ಪುನಃ ತಮ್ಮ ಗಮನ ಸೆಳೆಯುವುದಕ್ಕೆ ಆಸೆ ಇಲ್ಲ. ಒಂದು ವೇಳೆ ಸಂಬಂಧಪಟ್ಟ ಮಂತ್ರಿಗಳು ಕೌನ್ಸಿಲ್ಲಿಗೆ ಹೋದರೆ ಫೈಲ್ ಬೇರೆಯವರ ಕೈಯಲ್ಲಿ ಕೊಟ್ಟು ಉತ್ತರ ಕೊಡಿಸಬೇಕು. ಆಸೆಂಬ್ಲಿ ಕೆಲ್ಲೀಸ್ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪೋಲೀಸರಿಗಾದರೂ ಕಳುಹಿಸಿ, ಹುಡುಕಿ ಕೊಂಡು ಬರಲಿ.

ಅಧ್ಯಕ್ಷರು.—ಉತ್ತರ ಕೊಡಿಸುತ್ತೇನೆ ನಿಮಗೆ. ದಯವಿಟ್ಟು ಕೂತ್ಕೊಳ್ಳಿ.

ದಕ್ಷಿಣ ಕನ್ನಡ ಜಿಲ್ಲೆಯ ಗಡಿಗಳಿಂದ ಅರಣ್ಯ ಸಂಪತ್ತಿನ ಕಳ್ಳಸಾಗಾಣಿಕೆ

೩೧೦ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) —ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೪-೮೫ ಹಾಗೂ ೧೯೮೫-೮೬ರಲ್ಲಿ ದಕ್ಷಿಣ ಕನ್ನಡ ಗಡಿಗಳಿಂದ ಕೇರಳಕ್ಕೆ ಕಳ್ಳ ಸಾಗಾಣಿಕೆಯಾದ ಗಂಧ, ಬೀಟೆ ಇತರ ಅರಣ್ಯ ಸಂಪತ್ತಿನ ಪ್ರಕರಣಗಳೆಷ್ಟು ?

ಆ) ಈ ಬಗ್ಗೆ ಎಷ್ಟು ದಾವೆಗಳನ್ನು ಹಾಕಲಾಗಿದೆ ? ಎಷ್ಟು ಕ್ರಯದ ಸ್ವತ್ತು ಸ್ವಾಧೀನವಾಗಿದೆ ? ಎಷ್ಟು ಜನರಿಗೆ ಶಿಕ್ಷೆ ದಂಡ ವಿಧಿಸಲಾಗಿದೆ ?

ಇ) ಇಂತಹ ಕಾರ್ಯಗಳನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜೆ.ಎಸ್. ದೇಶ್‌ಮಾಂಯ್ (ಅರಣ್ಯ ಮಂತ್ರಿಗಳು),—

ಅ)

	೧೯೮೪-೮೫	೧೯೮೫-೮೬
ಗಂಧ	೫	೫
ಬೀಟೆ	೧	–
ಇತರೆ	೮	೭
	೧೪	೧೦
ಹೀಗೆ ಒಟ್ಟು ೨೪ ಪ್ರಕರಣಗಳು,		
ಗಂಧ	೪	೨
ಬೀಟೆ	–	–
ಇತರೆ	೧	–
	೫	೨

ಆ) ಹೀಗೆ ಒಟ್ಟು ೭ ದಾವೆ ಹಾಕಲಾಗಿದೆ. ಸ್ವಾಧೀನ ಪಡಿಸಿಕೊಂಡ ಸ್ವತ್ತಿನ ಕ್ರಯ ಈ ರೀತಿ ಇದೆ.

೧೯೪೪-೪೫	ರೂ.	೧೬,೯೮೦-೧೩
೧೯೪೫-೪೬	ರೂ.	೮,೧೯೪-೨೯
	ರೂ.	೨೫,೧೭೫-೪೨

೧೧ ಜನರಿಗೆ ಶಿಕ್ಷೆ ದಂಡವನ್ನು ವಿಧಿಸಲಾಗಿದೆ.

೩) ಮಂಗಳೂರಿನಲ್ಲಿರುವ ಅರಣ್ಯ ಸಂಚಾರಿ ದಳದ ಸಿಬ್ಬಂದಿ ವರ್ಗದವರಿಗೆ ಸೂಕ್ತ ಎಚ್ಚರಿಕೆ ನೀಡಲಾಗಿದೆ. ಗಡಿ ಪ್ರದೇಶಗಳಲ್ಲಿ ನಡೆಯುವಂತಹ ಅಕ್ರಮ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಆರಕ್ಷಕ ಇಲಾಖೆಯ ಸಂಚಾರಿ ದಳದ ೨ ಘಟಕಗಳು ಕೆಲಸ ನಿರ್ವಹಿಸುತ್ತವೆ. ದಿನಗೂಲಿಯಲ್ಲಿ ಕಳ್ಳ ಸಾಗಾಣಿಕೆ ನಿರೋಧಕ ವಾಚರುಗಳನ್ನು ನೇಮಿಸಲಾಗಿದ್ದು ಅವರು ಇಲಾಖಾ ಸಿಬ್ಬಂದಿಯೊಂದಿಗೆ ಗಡಿ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದಾರೆ. ವೈರ್‌ಲೆಸ್ ಸಲಕರಣೆಗಳನ್ನು ಕಳ್ಳಾಟಿಕೆಯಾಗಬಹುದಾದ ಸ್ಥಳಗಳಲ್ಲಿ ಅಳವಡಿಸಿದ ಕೆಲವು ತನಿಖಾ ಠಾಣೆಗಳಿಗೂ ಹಾಗೂ ಅರಣ್ಯ ಸಂಚಾರಿ ದಳದವರಿಗೂ ಒದಗಿಸಲಾಗಿದೆ.

ಶ್ರೀ ಬಿ.ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೆ, ೧೯೪೪-೪೫ರಲ್ಲಿ ಗಂಧದ ಮರ, ಬೀಟೆ ಮರ ಕಳ್ಳ ಸಾಗಾಣಿಕೆಯಾದ ಪ್ರಕರಣಗಳು ೧೬, ೧೯೪೫-೪೬ರಲ್ಲಿ ೧೦ ಎಂದು ತಿಳಿಸಿದ್ದಾರೆ. ಎರಡು ವರ್ಷದಲ್ಲಿ ೫ ಮತ್ತು ೨ ಒಟ್ಟು ೭ ದಾವೆಗಳನ್ನು ಹೂಡಿದ್ದೇವೆ ಎಂದು ಹೇಳುತ್ತಾರೆ. ರಮಣೀಯವಾದ ಅರಣ್ಯ ಸೌಂದರ್ಯವಿರತಕ್ಕ ಕರ್ನಾಟಕದಿಂದ ಗಂಧದ ಮರ ಮತ್ತು ಬೀಟೆ ಮರ ದಿನನಿತ್ಯ ಕಳ್ಳ ಸಾಗಾಣಿಕೆ ಆಗುತ್ತಾ ಇರುವ ವಿಚಾರ ಎಲ್ಲರಿಗೂ ಗೊತ್ತಿದೆ. ಹಾಗಿದ್ದರೂ ಬರೀ ೨೫ ಸಾವಿರ ರೂಪಾಯಿಯ ಸಾಮಾನು ಕಳ್ಳ ಸಾಗಾಣಿಕೆಯಾಗುತ್ತಿದೆ ಎಂದು ಹೇಳಿದ್ದಾರೆ. ಲಕ್ಷಾಂತರ ರೂಪಾಯಿಗಳ ಮರ ಗಡಿ ಪ್ರದೇಶದಲ್ಲಿ ಹೋಗುತ್ತಿದೆ ಎಂದು ಎಲ್ಲರಿಗೂ ಗೊತ್ತುಂಟು. ಆದರೆ ಉತ್ತರದಲ್ಲಿ ಹೇಳಿರುವುದು ನೋಡಿದರೆ ಅಧಿಕಾರಿಗಳು ಕಳ್ಳಸಾಗಾಣಿಕೆ ಆಗುತ್ತಿರುವುದನ್ನು ಹಿಡಿಯಲಿಲ್ಲವೋ ? ಅಥವಾ ದಾವೆ ಹಾಕಲಿಲ್ಲವೋ ? ಹೇಳಿ.

ಶ್ರೀ ಜೆ.ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೆ, ಲೆಕ್ಕ ಕೊಟ್ಟಿರುವುದು ಕೇವಲ ಟ್ರಕ್ ಮತ್ತು ಕಾರಿನಲ್ಲಿ ಹೋಗುವ ಲೆಕ್ಕ ಮಾತ್ರ ಅಲ್ಲ. ತಲೆಮೇಲೆ ಹೊತ್ತಿಕೊಂಡು ಸಾಗಾಣಿಕೆ ಮಾಡಿದ್ದಾರೆ. ಅದರ ವಿವರಣೆ ಕೊಟ್ಟಿದ್ದೇವೆ.

ಶ್ರೀ ಬಿ.ಎಂ. ಇದಿನಬ್ಬ.—ಇದನ್ನು ತಡೆಗಟ್ಟಲು ಇನ್ನು ಮುಂದೆ ಯಾವರೀತಿ ಜಾಗರೂಕತೆ ವಹಿಸಿದ್ದೀರಿ ? ಎಂದು ಕೇಳಿರುವುದಕ್ಕೆ ಬೇಕಾದಷ್ಟು ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೂ ಎರಡು ವರ್ಷದಲ್ಲಿ ೨೫ ಸಾವಿರ ರೂಪಾಯಿಯಷ್ಟು ಮರಗಳು ಮಾತ್ರ ಕಳ್ಳಸಾಗಾಣಿಕೆಯಾಗಿದೆ ಎಂದು ಹೇಳಿದರೆ ಅದು ನಂಬತಕ್ಕ ವಿಚಾರವಲ್ಲ. ಇನ್ನು ಮುಂದಾದರೂ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಕಠಿಣವಾದ ಮತ್ತು ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ದೇಶಮುಖ್.—ಈಗಾಗಲೇ ನಾನು ಹೇಳಿದಹಾಗೆ ಪುತ್ತೂರು, ಮಂಗಳೂರು ಮತ್ತು ಸುಳ್ಯದಲ್ಲಿ ಠಾಣೆಗಳನ್ನು ಸಂಸ್ಥಾಪನೆ ಮಾಡಿದ್ದೇವೆ. ಸಿಬ್ಬಂದಿ ಹೆಚ್ಚು ಮಾಡಿದ್ದೇವೆ.

ಚಿಂಚೋಳಿ ತಾಲ್ಲೂಕಿನಲ್ಲಿ ಎಷ್ಟು ಎಕರೆ (ಸಿ) ಮತ್ತು (ಡಿ) ವರ್ಗದ (ಅರಣ್ಯ) ಜಮೀನನ್ನು ಅನಧಿಕೃತವಾಗಿ ಸಾಗುವಳಿಯ ಬಗ್ಗೆ

೪೧೧ ಶ್ರೀ ವೀರಯ್ಯ ಸ್ವಾಮಿ (ಚಿಂಚೋಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಅರಣ್ಯ ಮತ್ತು ಮೀನುಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

೩) ಚಿಂಚೋಳಿ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಎಕರೆ 'ಸಿ ಮತ್ತು ಡಿ' ವರ್ಗದ (ಅರಣ್ಯ) ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ ?